**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ: ಜಿಲ್ಲೆಗಳಿಗೆ ಬಿಡುಗಡೆಯಾಗಿ ಖರ್ಚಾಗದೆ ಉಳಿದಿರುವ ಕೇಂದ್ರದ ಪಾಲಿನ ಹೆಚ್ಚುವರಿ ಅನುದಾನವನ್ನು ಹಿಂಪಡೆದು ಅವಶ್ಯಕತೆ ಇರುವ ಜಿಲ್ಲೆಗಳಿಗೆ ಮರು ಹಂಚಿಕೆ ಮಾಡಿ ಬಿಡುಗಡೆ ಮಾಡುವ ಬಗ್ಗೆ.**

ಉಲ್ಲೇಖ : 1. ಕೇಂದ್ರ ಸರ್ಕಾರದ ಅ.ಸ.ಪತ್ರ ಸಂಖ್ಯೆW-11023/01/2013-NBA dtd.26.08.2013

2. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ W.11013/2/2008 CRSP dtd.24.3.2009

3. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ W.11044/15/2009-CRSP dtd.8.7.2009

**ಪ್ರಸ್ತಾವನೆ :**

ನಿರ್ಮಲ ಭಾರತ್ ಅಭಿಯಾನ ಕಾರ್ಯಕ್ರಮವು ಕೇಂದ್ರ ಪುರಸ್ಕೃತ ಯೋಜನೆಯಾಗಿರುತ್ತದೆ. ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ನೇರವಾಗಿ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಲಾಗುತ್ತದೆ. ಕೆಲವೊಂದು ಜಿಲ್ಲೆಗಳಲ್ಲಿ ಕಾರ್ಯಕ್ರಮದ ಅನುಷ್ಠಾನದ ತೀವ್ರಗತಿಯು ಕಡಿಮೆ ಇದ್ದು, ಬಿಡುಗಡೆಯಾದ ಅನುದಾನವು ಖರ್ಚಾಗದೆ ಬಾಕಿ ಉಳಿದಿರುತ್ತದೆ ಹಾಗೂ ನಿಗಧಿಪಡಿಸಿರುವ ಕ್ರಿಯಾ ಯೋಜನೆಯನ್ನು ಅನುಷ್ಠಾನಗೊಳಸಲು ಅವಶ್ಯವಿರುವ ಅನುದಾನಕ್ಕಿಂತ ಹೆಚ್ಚುವರಿ ಅನುದಾನ ಲಭ್ಯವಿರುತ್ತದೆ. ಆದರೆ, ಕೆಲವೊಂದು ಜಿಲ್ಲೆಗಳಿಗೆ ಅನುದಾನದ ಕೊರತೆ ಇರುತ್ತದೆ. ಪ್ರಗತಿ ದೃಷ್ಟಿಯಿಂದ ಹಾಗೂ ಉಲ್ಲೇಖಿತ ಕೇಂದ್ರ ಸರ್ಕಾರದ ಪತ್ರದನ್ವಯ 2013-14ನೇ ಸಾಲಿಗೆ ಆರಂಭಿಕ ಶಿಲ್ಕು ಬಳಸದೇ ಆರ್ಥಿಕ ಪ್ರಗತಿ ಕುಂಠಿತಗೊಂಡಿರುವುದರಿಂದ 2013-14ನೇ ಸಾಲಿನ 1ನೇ ಕಂತಿನ ಅನುದಾನ ಬಿಡುಗಡೆ ಮಾಡಲು ಸಾಧ್ಯವಾಗುವುದಿಲ್ಲವೆಂದು ಸೂಚಿಸಲಾಗಿರುತ್ತದೆ. ಕೆಲವೊಂದು ಜಿಲ್ಲೆಗಳಲ್ಲಿ ಮಾರ್ಗಸೂಚಿಯಂತೆ ರಾಜ್ಯ ಕಚೇರಿಯಿಂದ ಬಿಡುಗಡೆಯಾದ ಅನುದಾನವನ್ನು ಜಿಲ್ಲಾ ಪಂಚಾಯತ್ ನಿಂದ ಗ್ರಾಮ ಪಂಚಾಯತ್‌ಗೆ 15 ದಿನಗಳೊಳಗಾಗಿ ಬಿಡುಗಡೆಯಾಗಬೇಕಾಗಿದ್ದು ಜಿಲ್ಲೆಯಲ್ಲಿಯೇ ಅನುದಾನ ಲಭ್ಯವಿರುವುದು ಅಂಕಿ ಅಂಶಗಳಿಂದ ತಿಳಿದು ಬಂದಿರುತ್ತದೆ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಪರಿಶೀಲಿಸಿ ಜಿಲ್ಲೆಗಳಲ್ಲಿ ಲಭ್ಯವಿರುವ ಹೆಚ್ಚುವರಿ ಕೇಂದ್ರದ ಪಾಲಿನ ಅನುದಾನವನ್ನು ಅವಶ್ಯಕತೆ ಇರುವ ಜಿಲ್ಲೆಗಳಿಗೆ ಮರುಹಂಚಿಕೆ ಮಾಡಲು ತೀರ್ಮಾನಿಸಲಾಗಿರುತ್ತದೆ. ಆದ್ದರಿಂದ ಈ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ/ಸಂ.ಸ್ವ.ಆಂ /120/09/11-12/2013-14 ದಿನಾಂಕ: 12.09.2013**/295

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧ-1 ರ ರಲ್ಲಿ ತೋರಿಸಿರುವ ಕಲಂ 2 ರ ಜಿಲ್ಲೆಗಳಿಂದ ಕೇಂದ್ರದ ಪಾಲಿನ ಅನುದಾನವನ್ನು ಹಿಂಪಡೆದು ಅನುಬಂಧ-1 ರ ಕಲಂ 4 ರಲ್ಲಿ ತೋರಿಸಿರುವ ಜಿಲ್ಲೆಗಳಿಗೆ ಮರು ಹಂಚಿಕೆ ಮಾಡಿ ಬಿಡುಗಡೆ ಮಾಡಲಾಗಿರುತ್ತದೆ. ಅನುಬಂಧ-1 ಕಲಂ 2 ರಲ್ಲಿ ಹೇಳಲಾದ ಜಿಲ್ಲೆಗಳು, ಹೆಸರಿನ ಮುಂದೆ ಸೂಚಿಸಿದ ಜಿಲ್ಲೆಗಳಿಗೆ ತಿಳಸಲಾದ ಮೊತ್ತವನ್ನು ಜಿಲ್ಲಾ ಪಂಚಾಯತ್‌ಗಳ ಯೋಜನಾ ಬ್ಯಾಂಕ್ ಖಾತೆಗೆ ಆರ್.ಟಿ.ಜಿ.ಎಸ್. ಮುಖಾಂತರ ಅನುಬಂಧ-1 ರ ಕಲಂ 4 ಜಿಲ್ಲೆಗಳಿಗೆ ವರ್ಗಾಯಿಸಿ ಲೆಕ್ಕ ಹೊಂದಾಣಿಕೆ ಮಾಡಿಕೊಳ್ಳಲು ಈ ಮೂಲಕ ಆದೇಶಿಸಿದೆ.

(ಟಿ.ಎಂ.ವಿಜಯ ಭಾಸ್ಕರ್) 13/9/13.
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಪ್ರತಿಯನ್ನು:**

1. ಸರ್ಕಾರದ ಕಾರ್ಯದರ್ಶಿಗಳು, ಗಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ-ಮಾಹಿತಿಗಾಗಿ
2. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ.& ಪಂ.ರಾಜ್ ಇಲಾಖೆ –ಮಾಹಿತಿಗಾಗಿ
3. ಮಿಷನ್ ನಿರ್ದೇಶಕರು ಹಾಗೂ ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಗ್ರಾ.ಅ.ಪಂ.ರಾಜ್ ಇಲಾಖೆ-ಮಾಹಿತಿಗಾಗಿ
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ , ಉತ್ತರ ಕನ್ನಡ, ಮೈಸೂರು, ಮಂಡ್ಯ, ಯಾದಗಿರಿ, ಗುಲ್ಬರ್ಗ, ಬಿಜಾಪುರ,ಬೀದರ್, ಬೆಂ.ಗ್ರಾಮಾಂತರ, ಬೆಳಗಾಂ, ಕೊಡಗು, ಗದಗ, ಮಂಗಳೂರು, ದಾವಣಗೆರೆ, ಕೋಲಾರ, ಹಾಸನ, ಚಿಕ್ಕ ಬಳ್ಳಾಪುರ, ಕೊಪ್ಪಳ & ಉಡುಪಿ ಇವರಿಗೆ ಸೂಕ್ತ ಕ್ರಮಕ್ಕಾಗಿ
5. ಕಚೇರಿ ಪ್ರತಿ

## ಅನುಬಂಧ-1

| ಕ್ರ.ಸಂ. | ಹಿಂಪಡೆಯಲಾದ ಜಿಲ್ಲೆಯ ಹೆಸರು | ಹಿಂಪಡೆಯಲಾದ ಮೊತ್ತ (ರೂ.ಕೋಟಿಗಳಲ್ಲಿ) | ಮರು ಹಂಚಿಕೆ ಮಾಡಿ ಬಿಡುಗಡೆ ಮಾಡಿದ ಜಿಲ್ಲೆಯ ಹೆಸರು | ಬಿಡುಗಡೆ ಮಾಡಿದ ಮೊತ್ತ (ರೂ.ಕೋಟಿಗಳಲ್ಲಿ) | ಬ್ಯಾಂಕ್‌ನ ಹೆಸರು | ಬ್ಯಾಂಕ್ ಖಾತೆ ಸಂಖ್ಯೆ | ಆರ್.ಟಿ.ಜಿ.ಎಸ್. ಸಂಖ್ಯೆ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | ಉತ್ತರ ಕನ್ನಡ | 10.00 | ಬೆಂಗಳೂರು ಗ್ರಾಮಾಂತರ | 3.00 | SBM | 54001116479 | SBMY0040626 |
| | | | ಬೆಳಗಾಂ | 5.00 | SBI | 10988609275 | SBIN0005536 |
| | | | ಕೊಡಗು | 2.00 | SBI | 30019769416 | SBIN0000876 |
| 2 | ಮೈಸೂರು | 5.00 | ಗದಗ | 2.00 | INGV0 | 143010018476 | VYSA0001430 |
| | | | ಮಂಗಳೂರು | 1.00 | UBI | 412902010010098 | UBIN0541290 |
| | | | ದಾವಣಗೆರೆ | 2.00 | Sy-B | 10012200056308 | SYNB0001001 |
| 3 | ಮಂಡ್ಯ | 8.00 | ದಾವಣಗೆರೆ | 7.00 | Sy-B | 10012200056308 | SYNB0001001 |
| | | | ಮಂಗಳೂರು | 1.00 | UBI | 412902010010098 | UBIN0541290 |
| 4 | ಯಾದಗಿರಿ | 2.00 | ಕೋಲಾರ | 2.00 | Sy-B | 15012200005146 | SYNB0001501 |
| 5 | ಗುಲ್ಬರ್ಗ | 8.00 | ಹಾಸನ | 5.00 | BOI | 846010100010922 | BKID0008460 |
| | | | ಚಿಕ್ಕಬಳ್ಳಾಪುರ | 3.00 | CAN | 0487101035731 | CNRB0000487 |
| 6 | ಬಿಜಾಪುರ | 3.00 | ಕೊಪ್ಪಳ | 2.00 | SBH | 52164017046 | SBHY0020206 |
| | | | ಬೆಳಗಾಂ | 1.00 | SBI | 10988609275 | SBIN0005536 |
| 7 | ಬೀದರ್ | 3.00 | ಉಡುಪಿ | 2.00 | SY-B | 02222200018909 | SYNB0000222 |
| | | | ಕೋಲಾರ | 1.00 | Sy-B | 15012200005146 | SYNB0001501 |
| | ಒಟ್ಟು | **39.00** | | **39.00** | | | |

ಸೂಚನೆ: 1. ಕೇಂದ್ರದ ಪಾಲಿನ ಅನುದಾನವನ್ನು ಜಿಲ್ಲೆಗಳಿಂದ ಜಿಲ್ಲೆಗೆ ವರ್ಗಾಯಿಸಿದ ಆದೇಶದ ಪ್ರತಿಯನ್ನು ಕೇಂದ್ರ ಕಚೇರಿಗೆ ಸಲ್ಲಿಸುವುದು

2. ಕೇಂದ್ರದ ಪಾಲಿನ ಅನುದಾನವನ್ನು ಜಿಲ್ಲೆಗಳಿಂದ ಪಡೆದ ಜಿಲ್ಲೆಗಳು ಸ್ವೀಕರಿಸಿದ್ದಕ್ಕೆ ಕೇಂದ್ರ ಕಚೇರಿಗೆ ವರದಿ ಸಲ್ಲಿಸುವುದು.

3. ಜಿಲ್ಲೆಗಳು ಅನುದಾನವನ್ನು ವರ್ಗಾಯಿಸುವ ಮುನ್ನ ಮೇಲಿನ ತಃಖ್ತೆಯಲ್ಲಿ ತೋರಿಸಿರುವ ಬ್ಯಾಂಕ್ ಖಾತೆ ಸಂಖ್ಯೆಯನ್ನು ಧೃಡಪಡಿಸಿಕೊಳ್ಳಬೇಕಾಗಿರುತ್ತದೆ.

(ಟಿ.ಎಂ.ವಿಜಯ ಭಾಸ್ಕರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ